අතී ತುರ್ತು

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 06 ಡಿವಿಪಿ (1) 2019 |71|

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 10-04-2019.

: ಹಿಂಬರಹ :

ಸರ್ಕಾರದ ಆದೇಶ ಸಂಖ್ಯೆ: ಇಡಿ 93 ಟಿಪಿಇ 2016, ದಿನಾಂಕ 30-03-2019 ರ ಆದೇಶವನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ನಿರ್ದೇಶಕರು.
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಇವರಿಗೆ:

1. ಪ್ರಾಂಶುಪಾಲರು, ಟಿಪ್ಪು ಶಹೀದ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಅನುದಾನಿತ ಪಾಲಿಟೆಕ್ನಿಕ್). ಹುಬ್ಬಳ್ಳಿ,
2. ಜಂಟಿ ನಿರ್ದೇಶಕರು (ಆಡಳಿತ), ನಿರ್ದೇಶನಾಲಯ, ಬೆಂಗಳೂರು
3. ಸಹಾಯಕ ನಿರ್ದೇಶಕರು (ಎಂಪಿಸಿ), ನಿರ್ದೇಶನಾಲಯ, ಬೆಂಗಳೂರು
4. ಆಡಳಿತಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
5. ಲೆಕ್ಕಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
6. ಸಂಯೋಜಕರು, ಹೆಚ್‌ಆರ್‌ಎಂಎಸ್, ನಿರ್ದೇಶನಾಲಯ, ಬೆಂಗಳೂರು
7. ರಿಜಿಸ್ಟ್ರಾರ್, ನಿರ್ದೇಶನಾಲಯ, ಬೆಂಗಳೂರು
8. ಅಧೀಕ್ಷಕರು, ಇಎಸ್‌ಟಿ (4)ಬಿ ವಿಭಾಗ, ನಿರ್ದೇಶನಾಲಯ, ಬೆಂಗಳೂರು
9. ಅಧೀಕ್ಷಕರು, ಎ.ಸಿ.ಎಂ ವಿಭಾಗ, ನಿರ್ದೇಶನಾಲಯ, ಬೆಂಗಳೂರು
10. ಕಾರ್ಯನಿರ್ವಾಹಕರು ಇಎಸ್‌ಟಿ (4)ಬಿ ವಿಭಾಗ, ನಿರ್ದೇಶನಾಲಯ, ಬೆಂಗಳೂರು
11. ಕಾರ್ಯನಿರ್ವಾಹಕರು, ಎ.ಸಿ.ಎಂ ವಿಭಾಗ, ನಿರ್ದೇಶನಾಲಯ, ಬೆಂಗಳೂರು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಟಿಪ್ಪು ಶಹೀದ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ, ಈ ಸಂಸ್ಥೆಗೆ ಸರ್ಕಾರದಿಂದ ನೀಡಿರುವ ವೇತನಾನುದಾನವನ್ನು ಹಿಂಪಡೆಯುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಇಡಿ 286 ಟಿಪಿಇ 1998, ದಿನಾಂಕ:03.03.2001.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 192 ಟಿಪಿಇ 2001, ದಿನಾಂಕ:10.01.2003
3. ಪೋಲಿಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ: ಲೋಕ್/ಎಡಿಜಿಪಿ/ಎಸ್.ಪಿ-1/ದೂರು-1139/2014, ದಿನಾಂಕ:11.12.2015
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 21 ಡಿವಿಪಿ (1) 2016, ದಿನಾಂಕ:14.11.2018.

TO Plans
E&A KB/OVP(1)
Cash
Csy & [illegible]
C 1/4

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ 15 ವರ್ಷಗಳ ಅಸ್ತಿತ್ವವನ್ನು ಪೂರೈಸಿರುವಂತ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇದರಲ್ಲಿ, ಟಿಪ್ಪು ಶಹೀದ್ ಪಾಲಿಟೆಕ್ನಿಕ್ ಈ ಸಂಸ್ಥೆಯು ಕೂಡ ಸೇರಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಅನುದಾನಕ್ಕೊಳಪಟ್ಟ ಟಿಪ್ಪು ಶಹೀದ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ ಈ ಸಂಸ್ಥೆಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಸಿಬ್ಬಂದಿ ನಮೂನೆಯನ್ನು ಮಂಜೂರು ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪೋಲಿಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತರವರ ಪತ್ರದಲ್ಲಿ ಟಿಪ್ಪು ಶಹೀದ್ ಇನ್ಸ್‌ಟ್ಯೂಟ್ ಆಫ್ ಟೆಕ್ನಾಲಜಿ (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ, (ಟಿ.ಎಸ್.ಐ.ಟಿ) ಸಂಸ್ಥೆಯ ವಿರುದ್ಧ ಅನಾಮದೇಯ ದೂರರ್ಜಿ ಲೋಕಾಯುಕ್ತ ಕಛೇರಿಯಲ್ಲಿ ಸ್ವೀಕೃತವಾಗಿದ್ದು, ಸದರಿ ದೂರರ್ಜಿಯಲ್ಲಿ ಟಿಎಸ್‌ಐಟಿ ಹುಬ್ಬಳ್ಳಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಅಬಿದ್ ಕಿತ್ತೂರ, ಇವರು ಮೊದಲು ಫತೇಷಾ ಹೈಸ್ಕೂಲನಲ್ಲಿ ಎಸ್.ಡಿ.ಎ ಆಗಿ 2004 ರವೆಗೆ ಸೇವೆಯನ್ನು ಸಲ್ಲಿಸಿ, ವೇತನವನ್ನು ಪಡೆದಿದ್ದು, 1980 ರಿಂದ ಟಿಎಸ್‌ಐಟಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ನಕಲು ದಾಖಲೆಗಳನ್ನು ಸೃಷ್ಠಿಸಿ, 2001 ರಲ್ಲಿ ಸದರಿ ಪಾಲಿಟೆಕ್ನಿಕ್ ಸಂಸ್ಥೆಯು ವೇತನಾನುದಾನಕ್ಕೆ ಒಳಪಟ್ಟ ಸಂದರ್ಭದಲ್ಲಿ ಸದರಿ ಸಂಸ್ಥೆಯಲ್ಲಿ ಪ್ರಮೋಷನ್ ಮೇಲೆ ಸೂಪರಿಂಡೆಂಟ್ ಎಂದು ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ದೂರರ್ಜಿಗೆ ಸಂಬಂಧಿಸಿದಂತೆ, ಪೋಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಧಾರವಾಡ ವಿಭಾಗ, ಧಾರವಾಡ ಇವರು ವಿಚಾರಣೆಯನ್ನು ನಡೆಸಿ, ಟಿಎಸ್‌ಐಟಿ ಕಾಲೇಜಿನ ದಿನಾಂಕ:20.11.1982ರ ಆದೇಶದಲ್ಲಿ, ಶ್ರೀ ಎ.ಎ.ಕಿತ್ತೂರ ಇವರಿಗೆ ಎಸ್.ಡಿ.ಎ ಎಂದು ನೇಮಕಾತಿ ಆದೇಶ ಮಾಡಿರುವುದು ಕಂಡುಬಂದಿದ್ದು, 1987ರಲ್ಲಿ ಎಫ್.ಡಿ.ಎ ಎಂದು ಮುಬಂಡ್ತಿ ನೀಡಿ, 1993 ರಲ್ಲಿ ಕಛೇರಿ ಅಧೀಕ್ಷಕರ ಹುದ್ದೆಗೆ ಪುನಃ ಮುಂಬಡ್ತಿಯನ್ನು ನೀಡಿರುವುದು ಪ್ರಾಂಶುಪಾಲರು ಒದಗಿಸಿರುವ ಮಾಹಿತಿಯಿಂದ ಕಂಡುಬಂದಿರುತ್ತದೆ. ಆದರೆ, ಶ್ರೀ ಎ.ಎ.ಕಿತ್ತೂರು ಇವರಿಗೆ 1989 ರಲ್ಲಿ ಆಡಳಿತ ಮಂಡಳಿಯವರು ಠರಾವು ಪಾಸು ಮಾಡಿ ಸದರಿಯವರನ್ನು ಎಸ್.ಡಿ.ಎ ಆಗಿ 1986ರಲ್ಲಿ

B-02 1/4/19
30/3/19 @ 6 PM

ಪುಟ 2ಕ್ಕೆ

ವೇತನಾನುದಾನಕ್ಕೆ ಒಳಪಡಿಸಲಾದ ಹಜರತ್ ಸೈಯದ್ ಫತೇಷಾ ಹೈಸ್ಕೂಲಿನಲ್ಲಿ ನೇಮಕಾತಿ ಮಾಡಿ, ಇಲಾಖೆಯಿಂದ ಅನುಮೋದನೆ ಮಾಡಿಸಿರುತ್ತಾರೆ. ಅಬೀದ್ ಕಿತ್ತೂರ ಇವರು 1989 ರಿಂದ 2004 ರ ಅವಧಿಯಲ್ಲಿ ಹಜರತ್ ಸೈಯದ್ ಫತೇಷಾ ಹೈಸ್ಕೂಲಿನಲ್ಲಿ ಸೇವೆ ಸಲ್ಲಿಸಿರುವುದು ಮತ್ತು ವೇತನವನ್ನು ಪಡೆದಿರುವುದು ಹಾಗೂ ಟಿಎಸ್‌ಐಟಿ ಪಾಲಿಟೆಕ್ನಿಕ್‌ನಲ್ಲು ಕಾರ್ಯನಿರ್ವಹಿಸಿರುವುದು ಕಂಡು ಬಂದಿರುತ್ತದೆ.

ಟಿ ಎಸ್ ಐ ಟಿ ಪಾಲಿಟೆಕ್ನಿಕ್‌ನ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು ಶಾಮಿಲಾಗಿ ಶ್ರೀ ಅಬೀದ ಕಿತ್ತೂರ ರವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ತಮ್ಮ ಅನುಕೂಲಕ್ಕೆ ತಕ್ಕಂತೆ ನೇಮಕಾತಿ ಮತ್ತು ಮುಂಬಡ್ತಿ ಆದೇಶಗಳನ್ನು ಸೃಷ್ಟಿಸಿಕೊಂಡಿರುವುದು ಮತ್ತು ಸುಳ್ಳು ದಾಖಲೆಗಳನ್ನು ಸೃಷ್ಠಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ, ಆಡಳಿತ ಮಂಡಳಿ ಹಾಗೂ ಎ.ಎ.ಕಿತ್ತೂರ ರವರ ಮೇಲೆ ಕಾನೂನು ರೀತಿ ಶಿಸ್ತು ಕ್ರಮ ಕೈಗೊಳ್ಳಲು ಕೋರಿ ವಿಚಾರಣಾಧಿಕಾರಿಗಳು ವಿಚಾರಣಾ ವರಧಿಯನ್ನು ಸಲ್ಲಿಸಿದ್ದು ಅದರಂತೆ ಸದರಿಯವರುಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿ ಪೋಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ರವರು ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರು ಪೋಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರ ವರದಿಯನ್ವಯ ಆಡಳಿತ ಮಂಡಳಿ ಹಾಗು ಎ.ಎ. ಕಿತ್ತೂರ, ಅದೀಕ್ಷಕರು, ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಅಧ್ಯಕ್ಷರಿಗೆ ಹಲವು ಬಾರಿ ತಿಳಿಸಲಾಗಿದ್ದರೂ ಸಹ ಇದುವರೆಗೂ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ. ಮುಂದುವರೆದು, ಟಿಪ್ಪು ಶಹೀದ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ, ಈ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರು ಸರ್ಕಾರದ ಆದೇಶಗಳನ್ನಾಗಲಿ ಅಥವಾ ಇಲಾಖಾ ಮುಖ್ಯಸ್ಥರ ಆದೇಶಗಳನ್ನಾಗಲಿ ಪಾಲಿಸದೆ ಕಾಲಹರಣ ಮಾಡುತ್ತಿದ್ದು ಇದನ್ನು ಗಂಬೀರವಾಗಿ ಪರಿಗಣಿಸಿ ಸದರಿ ಸಂಸ್ಥೆಗೆ ನೀಡಿರುವ ವೇತನಾನುದಾನವನ್ನು ಹಿಂಪಡೆಯಲು ತಾಂತ್ರಿಕ ಶಿಕ್ಷಣ ನಿರ್ದೇಶಕರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಕರಣದಲ್ಲಿ ಒದಗಿಬಂದ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿಲಾಗಿ, ಟಿಪ್ಪು ಶಹೀದ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ, ಈ ಸಂಸ್ಥೆಯ ಆಡಳಿತ ಮಂಡಳಿಯು ಶ್ರೀ ಎ.ಎ.ಕಿತ್ತೂರ, ಕಛೇರಿ ಅಧೀಕ್ಷಕರು ಇವರನ್ನು ಏಕಕಾಲದಲ್ಲಿ ಟಿಪ್ಪು ಶಹೀದ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ, ಮತ್ತು ಹಜರತ್ ಸೈಯದ್ ಫತೇಷಾ ಹೈಸ್ಕೂಲ್ ಇಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುವ ಕ್ರಮವು ಮತ್ತು ಏಕಕಾಲದಲ್ಲಿ ಎರಡು ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿ, ಸರ್ಕಾರಕ್ಕೆ ವಂಚಿಸಿ ವೇತನ ಮತ್ತು ಇತರೆ ಸೌಲಭ್ಯಗಳನ್ನು ಪಡೆದಿರುವುದು ಲೋಕಾಯುಕ್ತ ವರದಿಯಿಂದ ಕಂಡುಬಂದಿರುತ್ತದೆ. ಅಲ್ಲದೆ, ಮೇಲ್ಕಂಡ ಆರೋಪದ ಕುರಿತಂತೆ ಆಡಳಿತ ಮಂಡಳಿ ಹಾಗೂ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶಕರು ಹಲವು ಬಾರಿ ಪತ್ರಗಳಲ್ಲಿ ಹಾಗು ಷೋಕಾಸ್ ನೋಟೀಸ್‌ಗಳಲ್ಲಿ ತಿಳಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ಸಹ ಆರೋಪಕ್ಕೆ ಪುಷ್ಠೀಕರಿಸಿದಂತಿದೆ.

ಈ ಅಂಶಗಳನ್ನು ಗಮನಿಸಿದಲ್ಲಿ, ಟಿಪ್ಪು ಶಹೀದ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ, ಈ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿಯು ಸರ್ಕಾರದ ಹಾಗೂ ಇಲಾಖಾ ಮುಖ್ಯಸ್ಥರ ಆದೇಶಗಳನ್ನು ಪಾಲಿಸದಿರುವುದು ಹಾಗೂ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಸರ್ಕಾರಕ್ಕೆ ವಂಚಿಸಿರುವುದು ದೃಢಪಟ್ಟಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 286 ಟಿಪಿಇ 1998, ದಿನಾಂಕ:03.03.2001ರ ಆದೇಶದಲ್ಲಿ "ಸರ್ಕಾರ / ತಾಂತ್ರಿಕ ಶಿಕ್ಷಣ

ಪುಟ 3ಕ್ಕೆ

ನಿರ್ದೇಶಕರು ಕಾರ್ಯನೀತಿಗೆ ಅನುಗುಣವಾಗಿ ನಿಭಂದನೆಯನ್ನು/ಷರತ್ತನ್ನು ವಿಧಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಈ ನಿಭಂದನೆಗಳನ್ನು ಮತ್ತು ಷರತ್ತುಗಳನ್ನು ಪೂರೈಸದಿರುವ/ಉಲ್ಲಂಘಿಸಿದ ಪಾಲಿಟೆಕ್ನಿಕ್‌ಗಳಿಗೆ ನೀಡಲಾಗುವ ಅನುದಾನವನ್ನು ರದ್ದುಗೊಳಸುವ/ಹಿಂತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರ ಕಾಯ್ದಿರಿಸಿಕೊಂಡಿದೆ" ಎಂಬ ಷರತ್ತನ್ನು ವಿಧಿಸಲಾಗಿದೆ. ಸದರಿ ಷರತ್ತನ್ನು ಸಹ ಸಂಸ್ಥೆಯು ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಸದರಿ ಸಂಸ್ಥೆಗೆ ನೀಡುತ್ತಿರುವ ವೇತನಾನುದಾನದ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಇಡಿ 93 ಟಿಪಿಇ 2016.</u>**

**<u>ಬೆಂಗಳೂರು, ದಿನಾಂಕ:30ನೇ ಮಾರ್ಚ್ 2019.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಟಿಪ್ಪು ಶಹೀದ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಅನುದಾನಿತ) ಪಾಲಿಟೆಕ್ನಿಕ್, ಹುಬ್ಬಳ್ಳಿ, ಈ ಸಂಸ್ಥೆಯನ್ನು ವೇತನಾನುದಾನಕ್ಕೆ ಒಳಪಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಇಡಿ 286 ಟಿಪಿಇ 1998, ದಿನಾಂಕ:03-03-2001ನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶಿಸಿದೆ.

ಮೇಲ್ಕಂಡ ಸಂಸ್ಥೆಗೆ ಅನುದಾನವನ್ನು ಬಿಡುಗಡೆಗೊಳಸದಂತೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಈ ಮೂಲಕ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

30/3/19
(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

<u>ಗೆ:</u>

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಎಸ್ ಎಸ್ ಎ) ರವರ ಕಾರ್ಯದರ್ಶಿ, ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398 ಹಾಗೂ ಪ್ರಧಾನ ಮಹಾಲೇಖಪಾಲರು (ಎ & ಇ) ರವರ ಕಾರ್ಯದರ್ಶಿ, ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು
3. ಅಧ್ಯಕ್ಷರು, ಟಿಪ್ಪು ಶಹೀದ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಹುಬ್ಬಳ್ಳಿ.(ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
4. ಪ್ರಾಂಶುಪಾಲರು, ಟಿಪ್ಪು ಶಹೀದ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಅನುದಾನಿತ ಪಾಲಿಟೆಕ್ನಿಕ್, ಹುಬ್ಬಳ್ಳಿ, (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
5. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿ / ಒಡಿಜಿಸಿ